ಓ.ಎಸ್. ನಂ. 174/2015

ಡಿ.ಡಬ್ಲ್ಯು: 01 (ನಾಗರಾಜ)

ದಿನಾಂಕ: 21.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ – ಶ್ರೀ KJG ವಕೀಲರಿಂದ.

ದಾವಾ ಆಸ್ತಿಗಳ ಚೆಕ್ಬಂದಿ ನನಗೆ ಗೊತ್ತಿಲ್ಲ. ಐಟಂ ನಂಬರ್ 2 ರ ಪೂರ್ವಕ್ಕೆ ಸರ್ವೆ ನಂಬರ್ 239/ಎ ಜಮೀನು, ಪಶ್ಚಿಮಕ್ಕೆ ಸರ್ವೆ ನಂಬರ್ 238 ರ ಜಮೀನು, ಉತ್ತರಕ್ಕೆ ಹಾಮ್ಯಾ ನಾಯಕರ ಸರ್ವೆ ನಂಬರ್ 239/1 ಜಮೀನು, ದಕ್ಷಿಣಕ್ಕೆ ರತ್ನಾ ನಾಯಕರ ಜಮೀನು ಇದೆ ಎಂದರೆ ಸುಳ್ಳು.

ವಾದಿಗಳು ಎರಡೂ ಸರ್ವೆ ನಂಬರುಗಳನ್ನು ವಿಭಾಗ ಮಾಡಿಕೊಂಡ ಬಗ್ಗೆ 2015 ರಲ್ಲಿ ತಿಳಿದು ಬಂತು. ಸಾಕ್ಷಿ ಮುಂದುವರೆದು ನಾವೇ ಸ್ವಾಧೀನದಲ್ಲಿದ್ದೇವೆ. ಆದರೆ ಅವರು ಎಷ್ಟನೇ ಇಸವಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಿಭಾಗದನ್ವಯ ಪಹಣಿಗಳು ಬದಲಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳ ಹಿಂದೆ ಅವರ ಹೆಸರಿಗೆ ಪಹಣಿ ವರ್ಗಾವಣೆಯಾಗಿದೆ ಎಂದು ನನಗೆ ಗೊತ್ತಿಲ್ಲ. ವಿಭಾಗದನ್ವಯ ಸರ್ವೇ ಮಾಡಿದ ನಂತರ ಅವರ ಹೆಸರುಗಳಿಗೆ ಪಹಣಿ ಪತ್ರಿಕೆಯಾಗಿರುತ್ತದೆ ಎಂದರೆ ಸರ್ವೇ ಆಗಿರುವುದಿಲ್ಲ ಆದರೆ ಕಾನೂನುಬಾಹಿರವಾಗಿ ಮಾಡಿಕೊಂಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.